ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ?

ಶ್ರೀಮತಿ ರೇಣುಕಾ ರಾಜೇಂದ್ರನ್.—ತಾವು ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಪ್ರತಿಯೊಂದು ಮನೆಗೂ ೯ ಸಾವಿರ ರೂಪಾಯಿ ಪ್ರಕಾರ ಕೊಡುವ ದಾಗಿ ಉತ್ತರ ಹೇಳಿದ್ದೀರಿ. ಇದರ ಪ್ರಕಾರ ಎಷ್ಟು ಮನೆಗಳನ್ನು ತೆಗೆದುಕೊಳ್ಳುತ್ತೀರಿ? ಬೈಕ್‌ಅಪ್ ಏನು ಕೊಟ್ಟಿದ್ದೀರಿ. ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳು ಒಂದಕ್ಕೊಂದಕ್ಕೆ ಸರಿಹೊಂದಿಕೊಳ್ಳುತ್ತಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಈಗ ನಾವು ೩ ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡಿದ್ದೇವೆಂಬುದನ್ನು ಈಗ ಹೇಳಬೇಕಾದರೆ ಸ್ವಲ್ಪ ಕಷ್ಟವಾಗುತ್ತದೆ. ಆದರೆ ತಮಗೆ ಬೇಕಾದರೆ ವಿವರ ಗಳನ್ನು ಕಳುಹಿಸಿಕೊಡುತ್ತೇನೆ. ಇತ್ತೀಚೆಗೆ ಅಂದರೆ ಫೆಬ್ರವರಿ ಕೊನೆಯ ವೇಳೆಗೆ ವಿಶ್ವ ಬ್ಯಾಂಕ್‌ನವರು ಕೊಟ್ಟಿದ್ದಂಥ ಹಣವನ್ನು ಸರಿಯಾದ ರೀತಿಯಲ್ಲೇ ಉಪಯೋಗ ಮಾಡಿದ್ದೇವೆ ಈ ಹಣವನ್ನು ಅವರು ನಮಗೆ ಕೊಟ್ಟ ಮೇಲೆ ಅಲ್ಲಿಂದ ಕೆಲವು ಅಧಿಕಾರಿಗಳು ಬಂದು ನಾವು ಯಾವುಯಾವುದಕ್ಕೆ ಎಷ್ಟೆಷ್ಟು ಹಣ ವನ್ನು ಖರ್ಚು ಮಾಡಿದ್ದೇವೆಂಬುದನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಮಾಡಿ ಹೋಗಿದ್ದಾರೆ. ನಾವು ಎಲ್ಲೆಲ್ಲಿ ಎಕ್ಸ್‌ಪ್ಯಾನ್‌ಷನ್ ಕೆಲಸವನ್ನು ಮಾಡಿದ್ದೇವೋ ಅಲ್ಲಿಗೆಲ್ಲಾ ಆ ಅಧಿಕಾರಿಗಳನ್ನು ಜೊತೆ ಯಲ್ಲೇ ಕರೆದುಕೊಂಡು ಹೋಗಿ ತೋರಿಸಿ ಕಳುಹಿಸಿದ್ದೇವೆ. ಈಗ ಆ ವಿವರಗಳನ್ನೆಲ್ಲಾ ಇಲ್ಲಿ ಹೇಳುವು ದಕ್ಕೆ ಹೋದರೆ ಬಹಳ ತಡವಾಗುತ್ತದೆ. ೨ ಲಕ್ಷ ೭೭ ಸಾವಿರ ಎಕರೆ ಪ್ರದೇಶ ಏನಿದೆ ಅಲ್ಲಿ ಹಳೇ ಕಡ್ಡಿ ಯನ್ನು ಬೆಳೆಸಲಾಗುತ್ತಿತ್ತು. ಆದರೆ ಈಗ ಅದೇ ಪ್ರದೇಶದಲ್ಲಿ ಹೊಸ ತಳಿ ಕಡ್ಡಿಯಾದ ಎಂ-೫೦ನ್ನು ಬೆಳೆಸಲಾಗುತ್ತದೆ. ಇದಕ್ಕೆ ತಾಂತ್ರಿಕ ಸಲಹೆಯನ್ನು ಕೊಡಬೇಕಾಗುತ್ತದೆ. ರೈತರಿಗೆ ಒಳ್ಳೆಯ ಮೊಟ್ಟೆ ಯನ್ನು ಒದಗಿಸಬೇಕಾಗುತ್ತದೆ. ಇನ್ನೂ ಅನೇಕ ವಿಚಾರಗಳನ್ನು ಇಲ್ಲಿ ಹೇಳಬೇಕಾಗುತ್ತದೆ.

ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ನಮ್ಮ ರೇಷ್ಮೆ ಇಲಾಖೆಯಲ್ಲಿ ಎಷ್ಟೆಷ್ಟು ಹಣವನ್ನು ಯಾವ ಯಾವ ಬಾಬಿಗೆ ಖರ್ಚುಮಾಡಿದ್ದೇವೆ ಎಂಬುದನ್ನು ವಿವರವಾಗಿ ತಿಳಿದುಕೊಳ್ಳುವ ಆಸಕ್ತಿ ಇರುವ ಸದಸ್ಯರುಗಳು ಯಾವುದಾದರೂ ಒಂದು ದಿನವನ್ನು ಗೊತ್ತುಮಾಡಿಕೊಂಡು ಬಂದರೆ ಒಂದು ಸಭೆಯನ್ನು ನಡೆಸಿ ತಮಗೆ ಬೇಕಾದ ಅಂಕಿ ಅಂಶಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಎಂ.ಸಿ. ಬಸಪ್ಪ.—ಸ್ವಾಮಿ, ನಮಗೆ ಒದಗಿಸಿರತಕ್ಕ ಇಂಗ್ಲೀಷ್ ಪ್ರತಿಯಲ್ಲಿ ೩ನೇ ಐಟಂನಲ್ಲಿ ಫಿಲೇಚರ್‌ಗೆ ೫೯ ಲಕ್ಷ ರೂ. ಗಳನ್ನು ಪ್ರೊವೈಡ್ ಮಾಡಿದ್ದೀರಿ. ಮತ್ತು ೪ನೇ ಐಟಂನಲ್ಲಿ ಅದೇ ಫಿಲೇಚರ್‌ಗೋಸ್ಕರ ೪ ಕೋಟಿ ೨೪ ಲಕ್ಷ ಪ್ರೊವೈಡ್ ಮಾಡಿದ್ದೀರಿ ಈ ರೀತಿ ಅನಾಮಲಿ ಬರಲು ಕಾರಣ ಏನು? ಇದು ಒಂದಕ್ಕೊಂದಕ್ಕೆ ಸರಿಹೊಂದುವುದಿಲ್ಲ ಕರ್ನಾಟಕ ಸಿಲ್ಕ್ ಫಿಲೇಚರ್ ಇಂಡಸ್ಟ್ರೀಸ್ ನವರೇ ಈ ಎಲ್ಲ ಇಂಡಸ್ಟ್ರೀಸ್‌ನ್ನೂ ತೆಗೆದುಕೊಳ್ಳುವುದಿಲ್ಲವೆ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಈ ಸಿಲ್ಕ್ ಫಿಲೇಚರನ್ನು ಆಧುನೀಕರಣ ಮಾಡಬೇಕೆಂದಿ ದ್ದೇವೆ. ಆ ಪ್ರಕಾರ ನಾವು ಸಿಲ್ಕ್ ಫಿಲೇಚರ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಬರತಕ್ಕ ಹಣವನ್ನು ಕೊಡಬೇಕಾಗುತ್ತದೆ.

## Regional Workshop for Hassan City

938 Sri H. D. Deve Gowda (Holenarasipur).—Will the Minister for Transport and Minor Irrigation, be pleased to state:—

(a) whether it is fact that the K.S.R.T.C. has decided to establish Regional Workshop at Hassan;

(b) if so, when the work will be started;

(c) the amount provided for this work during this year;

(d) if so, the number of years required to complete this work?

SRI M.J. SADYOJATHA (Minister for Transport and Minor Irrigation).—

(a) Yes.

(b) The Work is at the initial stage. Arrangements are being made for the preparation of sketches, drawings and blue prints, models, and estimates required for the establishment of a Regional Work-shop. It requires about a month's time.

(c) In the budget for 1980-1981 no provision has been made for the establishment of this Regional Workshop But in the budget for 1981-82 provision will be made for the expenses for the establishment of this new workshop.

(d) About 3 years may be required for the completion of this work.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ''ಪ್ರಾದೇಶಿಕ ಕಾರ್ಯಾಗಾರದ ಸ್ಥಾಪನೆಗೆ ಬೇಕಾದ ರೂಪರೇಖೆಗಳು, ರೇಖಾಚಿತ್ರಗಳು, ಅಂದಾಜುಗಳು, ಹಾಗೂ ಮಾದರಿಗಳನ್ನು ತಯಾರಿಸುವ ಸಿದ್ಧತೆಗಳು ನಡೆಯುತ್ತಿವೆ. ಇದಕ್ಕೆ ಸುಮಾರು ಒಂದು ತಿಂಗಳು ಬೇಕಾಗುವುದು'' ಎಂದು ಹೇಳಿದ್ದೀರಿ. ಇದರ ಅಂದಾಜು ಎಷ್ಟು ಎಂಬುದನ್ನು ಹೇಳುತ್ತೀರಾ ?

† ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಹಾಸನದಲ್ಲಿ ತೆರೆಯಲಿರುವ ರೀಜನಲ್ ವರ್ಕ್‌ಷಾಪ್‌ನ ವ್ಯಾಪ್ತಿಯಲ್ಲಿ ಎಷ್ಟು ಜಿಲ್ಲೆಗಳು ಬರುತ್ತವೆ ? ಮತ್ತು ಆ ಜಿಲ್ಲೆಗಳಲ್ಲಿ ಇರುವ ವಾಹನಗಳನ್ನೆಲ್ಲಾ ಅಲ್ಲಿ ಸಿದ್ಧಪಡಿಸುವುದಕ್ಕೆ ಸಾಧ್ಯವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗ ಮುಖ್ಯವಾಗಿ ಇರುವುದು ಟಾಟಾ ಮತ್ತು ಲೇಲ್ಯಾಂಡ್ ಸಂಸ್ಥೆಗಳು. ಹುಬ್ಬಳ್ಳಿಯಲ್ಲಿ ಈ ವರ್ಕ್‌ಷಾಪನ್ನು ತೆಗೆಯುವುದಕ್ಕೆ ಏರ್ಪಾಡು ಮಾಡಿದ್ದೇವೆ. ಇದನ್ನು ೧೦೦ ಎಕರೆ ಜಾಗದಲ್ಲಿ ಕಟ್ಟುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ೧೯೮೧-೮೨ಕ್ಕೆ ಆಯವ್ಯಯದಲ್ಲಿ ಹಣವನ್ನೊದಗಿಸುತ್ತೇವೆಂದು ಹೇಳಿದಿರಿ. ಎಷ್ಟು ಹಣವನ್ನು ಒದಗಿಸುತ್ತೀರಿ ? ಮತ್ತು ನೀವು ನಿಗದಿ ಮಾಡಿರುವ ೩ ವರ್ಷಗಳಲ್ಲಿ ಈ ರೀಜನಲ್ ವರ್ಕ್‌ಷಾಪ್‌ನ್ನು ಮುಗಿಸುವುದಕ್ಕೆ ಸಾಧ್ಯವೆ? ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅಂದಾಜು, ನಕ್ಷೆ, ಎಲ್ಲಾ ತಯಾರಾದಮೇಲೆ ಇದಕ್ಕೆ ಎಷ್ಟೆಷ್ಟು ಹಣವನ್ನೊದಗಿಸಬೇಕಾಗುತ್ತದೆಂಬುದನ್ನು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ೧೯೮೧-೮೨ರಲ್ಲಿ ನಿಮ್ಮ ಆಯವ್ಯಯದಲ್ಲಿ ಈ ಬಾಬಿಗಾಗಿ ಎಷ್ಟು ಹಣವನ್ನು ಒದಗಿಸುತ್ತೀರಿ ಎಂಬುದನ್ನು ಸಭೆಗೆ ತಿಳಿಸಬೇಕು. ತಮಗೆ ಗೊತ್ತಾಗದಿದ್ದರೆ ನಾನೇ ಹೇಳುತ್ತೇನೆ ನೋಡಿ. ಈ ಯೋಜನೆಗೆ ಸುಮಾರು ೮ ಕೋಟಿ ರೂಪಾಯಿಗಳು ಬೇಕಾಗುತ್ತದೆ. ನೀವು ೩ ವರ್ಷದಲ್ಲಿ ಈ ವರ್ಕ್‌ಷಾಪ್‌ನ್ನು ಮುಗಿಸಬೇಕಾದರೆ ಪ್ರತಿವರ್ಷವೂ ೩ ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗುತ್ತದೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—೧೯೮೧-೮೨ನೇ ಸಾಲಿಗೆ ಇದಕ್ಕೆ ೧ ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಹಾಕಿಕೊಂಡಿರತಕ್ಕಂಥ ಕಾಲದಲ್ಲಿ ಈ ಕೆಲಸವನ್ನು ಮುಗಿಸಬೇಕಾದರೆ ಪ್ರತಿವರ್ಷವೂ ೩ ಕೋಟಿ ರೂಪಾಯಿಗಳನ್ನು ಒದಗಿಸಲೇಬೇಕಾಗುತ್ತದೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗ ೧ ಕೋಟಿ ರೂ. ಒದಗಿಸುತ್ತೇವೆ, ಇನ್ನೂ ಹೆಚ್ಚಿಗೆ ಬೇಕಾದರೆ ಆಮೇಲೆ ನೋಡೋಣ.